ಈ) ಇಲ್ಲ, ಆದಾಗ್ಯೂ ಕಾಲೇಜು ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳ ಊಟದ ವ್ಯವಸ್ಥೆಗಾಗಿ ಮಾಹೆಯಾನ ನೀಡಲಾಗುತ್ತಿರುವ ರೂ. 300-00ಗಳು ಸಾಕಾಗುತ್ತಿಲ್ಲವೆಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ.

ಉ) ಭೋಜನ ವೆಚ್ಚವನ್ನು ಹೆಚ್ಚಿಸುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

**ವಿಷಯ:- ಬಾದಾಮಿ ತಾಲ್ಲೂಕ್ ಕೆರೂರು ಪಟ್ಟಣಕ್ಕೆ ಐ.ಡಿ.ಎಸ್.ಎಂ.ಟಿ ಯೋಜನೆ**

1065 (2036) ಶ್ರೀ. ಬಿ.ಬಿ. ಚಿಮ್ಮನ ಕಟ್ಟಿ (ಬಾದಾಮಿ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಾದಾಮಿ ತಾಲ್ಲೂಕು ಕೆರೂರು ಪಟ್ಟಣ ಪಂಚಾಯತ್ ಅತೀ ಹಿಂದುಳಿದಿರುವುದು ಸರ್ಕಾರ ದವರ ಗಮನಕ್ಕೆ ಬಂದಿದೆಯೇ?

ಆ) ಕೆರೂರು ಪಟ್ಟಣದ ಸುಧಾರಣೆಗೆ ಈ ವರ್ಷ ಐ.ಡಿ.ಎಸ್.ಎಂ.ಟಿ. ಯೋಜನೆ ಅಳವಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

**ಶ್ರೀ. ಮಿರಾಜುದ್ದಿನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-**

ಅ) ಬಂದಿದೆ.

ಆ) ಕೆರೂರು ಪಟ್ಟಣವನ್ನು ಐ.ಡಿ.ಎಸ್.ಎಂ.ಟಿ ಯೋಜನೆಯಡಿಯಲ್ಲಿ ಅಳವಡಿಸುವ ಬಗ್ಗೆ ಮನವಿಗಳು ಸ್ವೀಕೃತವಾಗಿದ್ದು ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

**ವಿಷಯ:- ಬಾದಾಮಿ ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕೆ ಉದ್ದಿಮೆಗಳ ಕೊರತೆ**

1066 (2038) ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ ಜಿಲ್ಲೆ ಬಾದಾಮಿ ತಾಲ್ಲೂಕು ಸಣ್ಣ ಕೈಗಾರಿಕಾ ಉದ್ದಿಮೆಗಳಿಲ್ಲದಿರುವುದು ಸರ-ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಬರಗಾಲ ಪ್ರವೇಶದ ನಿರುದ್ಯೋಗಿ ಯುವಕರಿಗೆ ಪ್ರೋತ್ಸಾಹ ನೀಡಲು ಸರಕಾರ ದವರು ಸಣ್ಣ ಕೈಗಾರಿಕಾ ಉದ್ದಿಮೆಗಳ ಸ್ಥಾಪನೆಗೆ ಕ್ರಮ ಕೈಗೊಳ್ಳುವರೇ?

**ಶ್ರೀ ಬಿ.ಎ. ಮೊಹಿದ್ದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):-**

ಅ) 478 ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳಿವೆ.

ಆ) ಉದ್ಭವಿಸುವುದಿಲ್ಲ.

**ವಿಷಯ:- ಮೊಗೇರ ಜಾತಿಯನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿಸಿರುವುದು.**

1067 (1943) ಶ್ರೀ ಟಿ.ಪಿ.ಎಸ್. ಜಯವಂತ (ಸಿಠಸಿ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಆ) ಕೇಂದ್ರ ಸರ್ಕಾರದ 1996ರ ತಿದ್ದುಪಡಿಯ ನಂತರ ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಹಾಗೂ ವರ್ಗಗಳ ಸಂಖ್ಯೆ ಎಷ್ಟು?

ಆ) ಕರ್ನಾಟಕ ರಾಜ್ಯದಲ್ಲಿ ಮೊಗೇರ ಜಾತಿಯನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿಸಲಾಗಿದೆಯೇ?

ಇ) ಈ ಜಾತಿಯನ್ನು ಹಿಂದುಳಿದ ವರ್ಗದ ಪಟ್ಟಿಯಲ್ಲಿ ನಮೂದಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಮೊಗೇರ ಜಾತಿಯನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿಸಲು ಸರ್ಕಾರ ದವರು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವರೇ?

**ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಮಾನ್ಯ ಸಮಾಜ ಕಲ್ಯಾಣ ಸಚಿವರು):-**

ಆ) ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಜಾತಿ ಕುರಿತಂತೆ 1993ರಲ್ಲಿ ಯಾವುದೇ ತಿದ್ದುಪಡಿ ಆದೇಶ ಹೊರಡಿಸಿರುವುದಿಲ್ಲ.

ಆ) ಸೇರಿಸಲಾಗಿದೆ.

ಇ) ಬಂದಿದೆ.

ಈ) ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಮೊಗೇರ ಜಾತಿಯ ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗಗಳ ಪಟ್ಟಿ ಎರಡರಲ್ಲೂ ನಮಾದಾಗಿರುವ ನ್ಯೂನತೆಯನ್ನು ಸರಿಪಡಿಸಲು ಸರ್ಕಾರವು ಕ್ರಮಕೈಗೊಳ್ಳುವುದು.

**ವಿಷಯ:- ತುಮಕೂರು ಜಿಲ್ಲೆ ಹೆಬ್ಬೂರು ರೇಷ್ಮೆ ಬಿತ್ತನೆಗೂಡು ಮಾರಾಟ ಕೇಂದ್ರದಲ್ಲಿ ಕಳಪೆ ದರ್ಜೆ ಬಿತ್ತನೆ ಗೂಡು ಸರಬರಾಜು.**

1068 (1334) **ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):-** ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಆ) ತುಮಕೂರು ಜಿಲ್ಲೆ ಹೆಬ್ಬೂರು ಸರ್ಕಾರಿ ರೇಷ್ಮೆ ಬಿತ್ತನೆ ಗೂಡು ಮಾರಾಟ ಕೇಂದ್ರದಲ್ಲಿ ಸರ್ಕಾರಿ ಮೊಟ್ಟೆ ತಯಾರಿಕಾ ಕೇಂದ್ರಗಳಿಗೆ ಕಳಪೆ ದರ್ಜೆಯ ಬಿತ್ತನೆ ಗೂಡನ್ನು ಒದಗಿಸುತ್ತಿದ್ದು ಉತ್ತಮ ದರ್ಜೆಯ ಗೂಡನ್ನು ಖಾಸಗಿ ಮೊಟ್ಟೆ ತಯಾರಿಕಾ ಕೇಂದ್ರಗಳಿಗೆ ನೀಡುತ್ತಿರುವುದು ಸರ್ಕಾರ ದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಕಳಪೆ ದರ್ಜೆಯ ಬಿತ್ತನೆ ಗೂಡನ್ನು ಸರ್ಕಾರಿ ಮೊಟ್ಟೆ ತಯಾರಿಕಾ ಕೇಂದ್ರಕ್ಕೆ ಒದಗಿಸುತ್ತಿರುವುದರ ಬಗ್ಗೆ ಇಲಾಖೆಯವರು ಆಗಿಂದಾಗ್ಗೆ ತನಿಖೆಯನ್ನು ನಡೆಸಲು ಅಧಿಕಾರಿಗಳ ಮಟ್ಟದಲ್ಲಿ ಒಂದು ತಪಾಸಣಾ ತಂಡವನ್ನು ರಚಿಸುವುದು ನಿಜವೇ?